# ಚಂದದ ಹಸುರಿನ ಬಸರಿ ಮರ



ಆಲದಂತೆ ಬಿಳಲುಗಳಿದ್ದರೂ ರೆಂಬೆಗಳಿಂದ ಜೋತಾಡದೇ, ಮುಖ್ಯ ಕಾಂಡವನ್ನೇ ತಬ್ಬಿಕೊಂಡು ಬೆಳೆಯುವುದು ಬಸರಿ ಮರದ ವಿಶೇಷ.

■ ವಿನು ಗಂಗೆ



ನಮ್ಮ ಊರಿನ ಪಕ್ಕ ಉಪ್ಪಳ್ಳಿ ಎಂಬ ಊರಿದೆ. ಆ ಊರಲ್ಲಿ ಜನರು ಪೂಜಿಸುವ ದೊಡ್ಡದೊಂದು ಮರವಿದೆ. ನಾಲ್ಕು ವರ್ಷಗಳ ಹಿಂದೆ ನಾನು ಮೊದಲ ಸಲ ಆ ಮರವನ್ನು ಗಮನಿಸಿದಾಗ, ಅದರಲ್ಲಿದ್ದ ಹಕ್ಕಿಗಳ ಕಲರವ ನನ್ನನ್ನು ದಂಗಾಗಿಸಿತು. ಆ ಕೂಡಲೇ ಅಂತಹ ಒಂದು ಮರವನ್ನು ಬೆಳೆಸಬೇಕು ಎಂಬ ಆಸೆ ಎಷ್ಟು ತೀವ್ರವಾಗಿ ಮೂಡಿತೆಂದರೆ, ಸಾಮಾನ್ಯವಾಗಿ ಹೆಣ್ಣುಮಕ್ಕಳಿಗೆ ಮತ್ತೊಬ್ಬರ ಒಡವೆ ನೋಡಿ ನಮ್ಮ ಬಳಿ ಇರಲೇಬೇಕು ಎಂದು ಅನ್ನಿಸುವ ಹಾಗೆ. ಆದರೆ, ಆ ಮರದ ಸಸಿ ಅರಣ್ಯ ಇಲಾಖೆಯ ಯಾವ ನರ್ಸರಿಯಲ್ಲೂ ಸಿಗಲಿಲ್ಲ. ಆದರೂ ಮನಸ್ಸು ಹುಡುಕುತ್ತಲೇ ಇತ್ತು.

ಅದು ಬಸರಿ ಮರ. ನಮ್ಮ ದೇಶದಾದ್ಯಂತ ಬೆಳೆಯುವ, ಆದರೆ ವಿರಳವಾಗುತ್ತಿರುವ ಮರ. ಬಸರಿ ಮರದಲ್ಲಿ ಕರಿ ಬಸರಿ (**Ficus Virens**), ಬಿಳಿ ಬಸರಿ (**Ficus Infectoria**) ಎಂಬ ಎರಡು ವಿಧ ಇದೆ. ಹಿಂದೊಮ್ಮೆ ಗೋಣಿ ಮರದ ಬಗ್ಗೆ ಹೇಳಿದಂತೆ, ಇದು ಕೂಡ **Ficus** ಜಾತಿಯ ವೃಕ್ಷ – **Keystone species.** ಜೀವಕೊಂಡಿಯಲ್ಲಿರುವ ಇದರ ಪ್ರಾಮುಖ್ಯ ನಮ್ಮ ಸಂಸ್ಕೃತಿಯಲ್ಲಿ ಇದನ್ನು ಪೂಜಾರ್ಹವಾಗಿಸಿದೆ.

ಆಲದಂತೆ ಬಿಳಲುಗಳಿದ್ದರೂ ರೆಂಬೆಗಳಿಂದ ಜೋತಾಡದೇ, ಮುಖ್ಯ ಕಾಂಡವನ್ನೇ ತಬ್ಬಿಕೊಂಡು ಬೆಳೆಯುವುದು ಇದರ ವಿಶೇಷ. ಚಿಗುರಿದಾಗ ಇದರ ಸೊಬಗು ಕಂಡ ಹಿಂದಿನವರು, 'ಬಸರಿ ಮರದ ಹಸುರು ಚೆಂದ' ಎಂಬ ಗಾದೆಯನ್ನೇ ಮಾಡಿದ್ದಾರೆ.

ಈ ಮರ ನಾವು ಬೀಜ ಹಾಕಿ ಬೆಳೆಸುವುದು ಕಷ್ಟ. ಬೀಜ ಮೊಳಕೆ ಒಡೆಯಲು ಬಹಳಷ್ಟು ಸಮಯ ಹಾಗೂ ಒಂದು ಗೊತ್ತಾದ ಹದದಲ್ಲಿ ತೇವ ಬೇಕು. ಹಾಗಾಗಿ ಯಾವುದಾದರೂ ಹಕ್ಕಿಯ ಹಿಕ್ಕೆಯಿಂದ ಗೋಡೆ ಅಥವಾ ಮರದ ಸಂದಿಯಲ್ಲಿ ಬಿದ್ದ ಬೀಜ ಮೊಳಕೆ ಒಡೆಯುತ್ತದೆ. ಹೀಗೆ ಮೊಳಕೆಯೊಡೆದು ಆಶ್ರಯ ನೀಡಿದ ಮರವನ್ನೇ ಆವರಿಸಿ ಬೆಳೆಯುತ್ತದೆ.



ಚಿತ್ರದಲ್ಲಿ ದೊಡ್ಡ ಹುಣಸೆಮರದಲ್ಲಿ ಚಿಗುರೊಡೆದು ಬೆಳೆಯುತ್ತಿರುವ ಬಸರಿ ಸಸಿ, ಹಾಗೂ ಆಶ್ರಿತ ಮರವನ್ನು ಸಂಪೂರ್ಣ ಆವರಿಸಿರುವ ಬಸರಿ ಮರವನ್ನು ನೋಡಬಹುದು. ಇದರ ಎಲೆಗಳು ವಿಷಕಾರಿಯಾಗಿದ್ದು, ಜಾನುವಾರುಗಳು ತಿಂದರೆ ಸಾವಿಗೀಡಾಗುತ್ತವೆ. ಸಾಮಾನ್ಯವಾಗಿ ಅವು ತಿನ್ನುವುದಿಲ್ಲ.

ಬಸರಿ ಮರ ಬೆಳೆಯುವ ನನ್ನ ಬಯಕೆ ಈಡೇರಿಸುವ ನಿಟ್ಟಿನಲ್ಲಿ ಮಾಡಿದ ಗೆಲ್ಲುಗಳನ್ನು ನೆಡುವ ಪ್ರಯತ್ನ ಫಲ ನೀಡಲಿಲ್ಲ. ಬಹುಶಃ ಗೆಲ್ಲುಗಳಿಂದ ಮೊಳಕೆ ಮೂಡಲು ಬೆಂಗಳೂರಿನಲ್ಲಿ ಸರಿಯಾದ ಬೆಚ್ಚಗಿನ ತೇವಾಂಶಭರಿತ ವಾತಾವರಣದ ಕೊರತೆಯಾಗಿರಬಹುದು. ಆದರೂ ನಾನು ಕಂಡಂತೆ ನಮ್ಮ ಎಲ್ಲ ನಿಸ್ವಾರ್ಥದ ಹುಡುಕಾಟಗಳೂ, ನಿರೀಕ್ಷೆಗಳೂ ಹೆಚ್ಚು ಸಮಯ ಕಾಯಿಸದೇ ನಮ್ಮ ಮುಂದೆ ತೆರೆದುಕೊಳ್ಳುತ್ತವೆ. ಅಂತೆಯೇ ನನ್ನ ಬಸರಿ ಮರ ಬೆಳೆಯುವ ಬಯಕೆ ಅನಿರೀಕ್ಷಿತವಾಗಿ ಈಡೇರಿತು! ಸಿಕ್ಕ ಸಿಕ್ಕ ಮರದ ಪೊಟರೆಗಳಲ್ಲಿ ಕಾಣುವ ಸಸಿಗಳನ್ನು ಬಸರಿ ಸಸಿಯೇ? ಎಂದು ಹಣಕುತ್ತಿದ್ದಾಗ, ಎತ್ತರದ ಮರಗಳಲ್ಲಿ ಕಂಡು ಕೈಗೆಟುಕದ ಬಸರಿ ಸಸಿ, ಒಂದು ದಿನ ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡರಿದಂತೆ ನಮ್ಮ ಕಚೇರಿಯ ಸ್ವಲ್ಪ ದೂರದ ಖಾಸಗಿ ಆಸ್ಪತ್ರೆಯ ಕಾಂಪೌಂಡ್ ಗೋಡೆಯಲ್ಲಿ ಅಚಾನಕ್ಕಾಗಿ ಕಂಡಿತು. ಬೇರು ಸಡಿಲವಾಗಲು ಮಳೆಗಾಗಿ ಕಾಯ್ದು, ಹುಡುಗರ ಸಹಾಯದಿಂದ ಹಾರೆ ತಂದು, ಆಸ್ಪತ್ರೆಯವರ ಕಣ್ಣು ತಪ್ಪಿಸಿ, ಗೋಡೆ ಜಖಂ ಮಾಡದೇ ಜೋಪಾನವಾಗಿ ಗಿಡ ಕೀಳಿಸಿ ತಂದೆ. ಸ್ವಲ್ಪ ದಿನ ನಮ್ಮ ಮನೆಯಲ್ಲಿ ಕಾಪಾಡಿ, ನಂತರ ಊರಿನ ರಸ್ತೆ ಪಕ್ಕದಲ್ಲಿ ನೆಟ್ಟೆ. ಈಗ ಅದರ ಬೆಳವಣಿಗೆಗೆ ಕಾಯುತ್ತಾ ಇದ್ದೇನೆ.

ಬಸರಿ ಮರದ ಹಸಿರು–ನೆರಳು ಎಲ್ಲೆಡೆ ಕಾಣುವಂತಾಗಲಿ ಎಂಬ ಬಯಕೆ.

ಪ್ರತಿಕ್ರಿಯಿಸಿ: feedback@sudha.co.in